ಇಂದಿನವರ ಮುಂದೆ ಅವರು ಮೇಲ್ನೋಟಕ್ಕೆ ಮಂಕಾದಂತೆ ಕಂಡರೂ, ತಾಳ್ಮೆಯಿಂದ ಕೇಳಿಸಿಕೊಂಡ ಎಂಥವರೂ ಕೂಡ ಯಾವುದೋ ಗುಟ್ಟನ್ನು ಕೇಳಿಸಿಕೊಳ್ಳುವವರಂತೆ ಅಹುದಹುದೆಂದು ತಲೆದೂಗುತ್ತಿದ್ದರು. ಹಾಗಿತ್ತು ಅವರ ಶೈಲಿ. ಅದು ತುಂಬಿದ ಕೊಡದಿಂದ ಬರುವ ನೀರಿನ ಸಣ್ಣ ಸದ್ದಿನಷ್ಟು ಸೌಮ್ಯವಾಗಿರುತ್ತಿತ್ತು.

ನವಕರ್ನಾಟಕ ಪ್ರಕಾಶನದ ರೂವಾರಿ ರಾಜಾರಾಮ್ ಅವರ ಆಶಯದಂತೆ ಬರೆದ 'ಭಗವದ್ಗೀತೆ ಒಂದು ವೈಚಾರಿಕ ಒಳನೋಟ', 'ವಾಸ್ತು ಎಷ್ಟು ವಾಸ್ತವ?', 'ಪವಾಡ ಪರೀಕ್ಷೆ', 'ದೇವರನ್ನು ಕುರಿತು', 'ವೇದಗಳಲ್ಲಿ ಜನಸಾಮಾನ್ಯರು', 'ಧರ್ಮ ಮತ್ತು ವೈಚಾರಿಕತೆ' ಮುಂತಾದ ಪುಸ್ತಕಗಳು ಎಲ್ಲರಂತೆ ನನ್ನ ವೈಚಾರಿಕತೆಯನ್ನೂ ವಿಸ್ತರಿಸಿದವು. ನನ್ನ ಮೊದಲ ಕಥಾಸಂಕಲನ 'ಮಂಡಲ'ದ ಬಿಡುಗಡೆಗೆ ಅತಿಥಿಯಾಗಿ ಬಂದವರು, ನಂತರ ನನ್ನ ರಾಮಾಯಣವನ್ನು ಕುರಿತಾದ 'ಕಾಂಡ' ಕಾದಂಬರಿ ಬಿಡುಗಡೆಗೂ ಬಂದಿದ್ದರು. ಆನಂತರ ಬರವಣಿಗೆ ಹಂತದಲ್ಲಿದ್ದ ಮಹಾಭಾರತ ಕುರಿತಾದ ನನ್ನ 'ದ್ವಾಪರ' ಕಾದಂಬರಿಗೆ ಅನೇಕ ಒಳನೋಟಗಳನ್ನು ಒದಗಿಸಿದ್ದರು. ಪುರಾಣ ಇತಿಹಾಸವಾಗುವ ಪ್ರಕ್ರಿಯೆಯ ಕುರಿತು ಮಾತಾಡುತ್ತ, ಈಗಿನ ಆಡಳಿತ ಪಕ್ಷ, ವಿರೋಧ ಪಕ್ಷಗಳವರಂತೆ ಪಾಂಡವರಾಗಲೀ, ಕೌರವರಾಗಲೀ ಯಾರಿಗಿಂತ ಯಾರೂ ಕಮ್ಮಿಯಿರಲಿಲ್ಲ ಎಂದು ಪದೇಪದೇ ಹೇಳುತ್ತಿದ್ದರು. ಕೌರವರ ಹೆಸರಿನ ಮುಂದೆ 'ಸು' ಬದಲು 'ದು' ಸೇರ್ಪಡೆಯಾದ ರಹಸ್ಯದ ಬಗ್ಗೆ ನನ್ನೊಂದಿಗೆ ಚರ್ಚಿಸುತ್ತಲೇ ಅವರಿಗೊಂದು ಸ್ಪಷ್ಟತೆ ಸಿಕ್ಕು, 'ಕೌರವರ ಹೆಸರಿನ ಹಿಂದಿನ ಗುಟ್ಟು' ಎಂಬ ಲೇಖನ ಬರೆದಿದ್ದರು. ಅವೇ ಅಂಶಗಳಿಂದ ನನಗೊಂದು ನಿಖರತೆ ದಕ್ಕಿ, ನಾನೂ ಅದನ್ನು ಕಾದಂಬರಿ ರೂಪದಲ್ಲಿ ಅಳವಡಿಸಿಕೊಂಡೆ.

ಬಿ.ವಿ.ವೀ. ಹೆಣ್ಣುಮಕ್ಕಳ ಪರವಾದ ಒಂದು ನಿಲುವನ್ನೂ ತಳೆದಿದ್ದರು. ವೇದಗಳಲ್ಲಿ ಮಹಿಳೆಯರಿಗೆ ಇದ್ದ ಸ್ಥಾನಮಾನದಿಂದ ಹಿಡಿದು, ಇವತ್ತಿನ ಮಹಿಳಾ ಮೀಸಲಾತಿಯವರೆಗೆ ಪ್ರಸ್ತಾಪಿಸುತ್ತಿದ್ದರು. ಗಂಡಿಗಿಂಥ ಹೆಣ್ಣಿನ ದೃಷ್ಟಿ, ಅಂತರ್‌ದೃಷ್ಟಿ ವಿಶಾಲ ಎಂಬುದನ್ನು ವಿವರಿಸುತ್ತ 'ಕಣ್ಣು ಹಾಕೀರಿ, ಜೋಕೆ' ಎಂದು ಎಚ್ಚರಿಸಿ 'ಪ್ರಜಾವಾಣಿ'ಗೆ ಲೇಖನ ಬರೆದಿದ್ದರು. ಹೀಗೆ ನನ್ನೊಂದಿಗೆ ಚರ್ಚಿಸಿದ್ದ ಅನೇಕ ವಿಚಾರಗಳು ಲೇಖನಗಳಾಗಿ, 'ವೇದಾಂತ ರೆಜಿಮೆಂಟ್'ನಷ್ಟೇ ಮೌಲಿಕವಾದ 'ಪೂರ್ವನಿಶ್ಚಿತ ದೃಷ್ಟಿಕೋನ'ದಲ್ಲಿ ಸಂಕಲಿತವಾಗಿವೆ.

ಬಿ.ವಿ.ವೀ. ಅವರ ಬರಹಗಳಲ್ಲಿ ಕ್ರಾಂತಿಯ ಕಹಳೆಯಿರುತ್ತಿರಲಿಲ್ಲ, ಓದುಗರನ್ನು ಕೆರಳಿಸುತ್ತಲೂ ಇರಲಿಲ್ಲ. ಅವರು ಹೇಳುತ್ತಿದ್ದ ವಿಚಾರಗಳಿಗೆ ಪೂರಕವಾಗಿ ನೀಡುತ್ತಿದ್ದ ಪಥ್ಯದ ಉಲ್ಲೇಖದಿಂದಲೇ ಮೂಲಭೂತವಾದಿಗಳ ಬಾಯಿ ಮುಚ್ಚಿಸುತ್ತಿದ್ದರು. ವೇದ, ಉಪನಿಷತ್, ಭಗವದ್ಗೀತೆ, ಪುರಾಣಗಳು, ವಚನಗಳ ಜೊತೆಗೆ ಆಧುನಿಕ ವಿಚಾರವಾದಗಳನ್ನೂ ಕುರಿತ ಆಳವಾದ ಓದಿನ ಕಾರಣವಾಗಿ, ಅವುಗಳ ಮೂಲೆಮೂಲೆಗಳಿಂದ ಹೆಕ್ಕಿ ತರುತ್ತಿದ್ದ ಸತ್ಯಗಳ ನಿಖರತೆ, ಸ್ಪಷ್ಟತೆಯ ಕಾರಣಗಳಿಂದಾಗಿ, ಅದನ್ನು ಅರಗಿಸಿಕೊಳ್ಳಲಾರದೇ ಸನಾತನವಾದಿಗಳು, ಸಂಪ್ರದಾಯವಾದಿಗಳು ತುಟಿಪಿಟಕ್ಕೆನ್ನುತ್ತಿರಲಿಲ್ಲ. ಅದಕ್ಕೆಂದೇ ಬಿ.ವಿ.ವೀ. ಬರೆದದ್ದಕ್ಕಿಂತ ಓದಿದ್ದೇ ಹೆಚ್ಚು. ಒಂದೊಂದು ಲೇಖನಕ್ಕಾಗಿ ಅವರು ನೂರಾರು ಪುಟಗಳನ್ನು ತಡಕಾಡಿರುತ್ತಿದ್ದರು. ಅವರ ಮನೆಯ ಗ್ರಂಥಾಲಯದಲ್ಲಿ ಅಂಥ ಅಪರೂಪದ ಸಾವಿರಾರು ಪುಸ್ತಕಗಳಿವೆ.

ಬಿ.ವಿ.ವೀ. ನಿರೀಶ್ವರವಾದಿ. ಅವರ ಮನೆಯ ಹೆಸರು ಕೂಡ 'ಲೋಕಾಯತ'ವನ್ನೇ ಪ್ರತಿಪಾದಿಸುತ್ತಿತ್ತು. ಅವರಿಗೆ ಬುದ್ಧಿ ಬಂದಾಗಿನಿಂದ ಜೀವನದ ಕೊನೇ ದಿನದವರೆಗೂ ಒಂದು